# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 249 (234)
ಸದಸ್ಯರ ಹೆಸರು : ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.)
ಉತ್ತರಿಸಬೇಕಾದ ದಿನಾಂಕ : 09.12.2025
ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಗರಾಭಿವೃದ್ಧಿ ಇಲಾಖೆಯಡಿ ಬರುವ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ಸಂಖ್ಯೆ ಎಷ್ಟು; | ನಗರಸಭೆಗಳ ಸಂಖ್ಯೆ: 64<br>ಮಹಾನಗರ ಪಾಲಿಕೆಗಳ ಸಂಖ್ಯೆ: 13 |
| ಆ) | ನಗರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ಸಂಖ್ಯೆ ಎಷ್ಟು; ಈ ಪೈಕಿ ಇ-ಖಾತಾ ಆಗದೇ ಇರುವ ಸ್ವತ್ತುಗಳ ಸಂಖ್ಯೆ ಎಷ್ಟು; ಬಾಕಿ ಇರುವ ಸ್ವತ್ತುಗಳಿಗೆ ಇ-ಖಾತಾ ನೀಡುವುದು ಯಾವಾಗ; | ನಗರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ವಿವರ ಈ ಕೆಳಗಿನಂತಿದೆ.<br>ಒಟ್ಟು ಸ್ವತ್ತುಗಳ ಸಂಖ್ಯೆ: 3757834<br>ಇ-ಖಾತಾ ನೀಡಲಾದ ಸ್ವತ್ತುಗಳ ಸಂಖ್ಯೆ: 979705<br>ಇ-ಖಾತಾ ನೀಡಲು ಬಾಕಿ ಉಳಿದ ಸ್ವತ್ತುಗಳ ಸಂಖ್ಯೆ: 2778129<br>ಇ-ಖಾತಾ ಕುರಿತು ಈಗಾಗಲೇ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ, ಖಾತಾ ಆಂದೋಲನವನ್ನು ಸಹ ಹಮ್ಮಿಕೊಳ್ಳಲಾಗಿದೆ. ಸ್ವತ್ತಿನ ಮಾಲೀಕರು ನಿಗಧಿಪಡಿಸಿದ ದಾಖಲೆಗಳನ್ನು ಹಾಜರುಪಡಿಸಿದ ನಂತರ ನಿಯಮಾನುಸಾರ ಇ-ಖಾತಾ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಇ-ಖಾತಾವನ್ನು ನೀಡಿದ ನಂತರ ಕಾನೂನಾತ್ಮಕವಾಗಿ ಸ್ವತ್ತನ್ನು ಖರೀದಿದಾರರಿಗೆ ಪೂರ್ಣವಾಗಿ ವರ್ಗಾವಣೆ ಮಾಡಲಾಗಿದೆಯೇ; | ಇ-ಆಸ್ತಿ ಮತ್ತು ಕಾವೇರಿ ತಂತ್ರಾಂಶಗಳ ಜೋಡಣೆ ಮಾಡಲಾಗಿದ್ದು, ದಿನಾಂಕ:07.10.2024 ರಿಂದ ವಹಿವಾಟು ನೋಂದಣಿಯಾದ ನಂತರ ಸ್ಥಳೀಯ ಸಂಸ್ಥೆಗಳಿಗೆ ಇ-ಆಸ್ತಿ ತಂತ್ರಾಂಶಕ್ಕೆ ವಿವರಗಳು ಸಲ್ಲಿಕೆಯಾಗುತ್ತಿದ್ದು, ನಿಗಧಿತ ಅವಧಿಯಲ್ಲಿ ಹಕ್ಕು ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| ಈ) | ನಗರಸಭೆ ಮತ್ತು ಪುರಸಭೆಗಳಿಂದ ರೆವಿನ್ಯೂ ನಿವೇಶನಗಳಿಗೆ ನೀಡಿರುವ ಇ-ಖಾತಾಗಳು ಕಾನೂನು ಬದ್ಧವೇ, ಇವುಗಳನ್ನು ಸಕ್ರಮಗೊಳಿಸಲು ಸರ್ಕಾರದ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಪ್ರಕರಣ 106 ಕ್ಕೆ ದಿನಾಂಕ: 10-09-2024 ರಂದು ಮಾಡಿರುವ ತಿದ್ದುಪಡಿಯಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಿನಾಂಕ:10-09-2024 ರ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನಿರ್ಮಿಸಲಾದ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಬಿ-ಖಾತಾ ನೀಡಲಾಗುತ್ತಿದೆ.<br><br>ಅಂತಹ ಸ್ವತ್ತುಗಳಿಗೆ ಬಿ-ಖಾತಾ ನೀಡುವುದರಿಂದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಅಥವಾ ಆ ಸ್ವತ್ತಿನ ಹಕ್ಕು ಸ್ವಾಮ್ಯ ಒಡೆತನಕ್ಕೆ ಕಾನೂನು ಸ್ಥಾನಮಾನವನ್ನು ದೊರಕಿಸಿಕೊಡುವುದಿಲ್ಲ.<br><br>ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಕುರಿತಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು SLP(C)No.956-957/2017 ರಂದು ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುತ್ತದೆ. ಆದ್ದರಿಂದ ಪ್ರಸ್ತುತ ಬಿ-ಖಾತಾ ಸ್ವತ್ತುಗಳನ್ನು ಸಕ್ರಮಗೊಳಿಸುವ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಸಂಖ್ಯೆ: ನಅಇ 14 ಜಿಇಎಲ್ 2026 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು